# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 850 (990) |
| 2. | ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸುವ ದಿನಾಂಕ | : | 19.12.2018 |
| 4. | ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಮಂಗಳೂರು ಜಿಲ್ಲೆಯ ಮುಡಿಪು ಬಳಿ ಕೆನರಾ ಕೈಗಾರಿಕಾ ಪ್ರದೇಶ ನಿರ್ಮಿಸಿದ್ದು, ಇದಕ್ಕೆ 650 ಎಕ್ರೆ ಭೂಸ್ವಾಧೀನಪಡಿಸಿ ಕೊಳ್ಳಲಾಗಿದ್ದು, ಇಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ನಿರೀಕ್ಷೆಯಂತೆ ಕೈಗಾರಿಕೆ ಸ್ಥಾಪನೆ ಮಾಡಲು ಉದ್ದಿಮೆದಾರರು ಮುಂದೆ ಬರುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆ.ಐ.ಎ.ಡಿ.ಬಿ.ಯು ದಕ್ಷಿಣ ಕನ್ನಡ ಜಿಲ್ಲೆಯ ಮುಡಿಪು ಬಳಿ ಕೆನರಾ ಕೈಗಾರಿಕಾ ಪ್ರದೇಶದ 1ನೇ ಹಂತಕ್ಕಾಗಿ ಒಟ್ಟು 585-66 ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಂಡು ರಸ್ತೆ, ಚರಂಡಿ ನಿರ್ಮಿಸಲಾಗಿರುತ್ತದೆ. ವಿದ್ಯುತ್ ಸೌಲಭ್ಯಗಳ ಕಾಮಗಾರಿಯು ಅಂತಿಮ ಹಂತದಲ್ಲಿರುತ್ತದೆ.<br><br>ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ನಿರೀಕ್ಷಿತ ಮಟ್ಟದಲ್ಲಿ ಬೇಡಿಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ. | ಈ ಪ್ರದೇಶದಲ್ಲಿ ಎಷ್ಟು ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ನೀಡಲಾಗುವುದು; ಪ್ರಸ್ತುತ ಎಷ್ಟು ಕೈಗಾರಿಕೆ ಸ್ಥಾಪನೆಗೊಂಡಿವೆ; | ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ಒಟ್ಟು 51 ನಿವೇಶನಗಳ 404-60 ಎಕರೆ ಜಮೀನು ಹಂಚಿಕೆಗೆ ಲಭ್ಯವಿದ್ದು, ಈ ಪೈಕಿ ಮೂರು ಘಟಕಗಳಿಗೆ ಒಟ್ಟು 114-16 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ. ಇನ್ನು 290-44 ಎಕರೆ ಜಮೀನು ಹಂಚಿಕೆಗೆ ಲಭ್ಯವಿರುತ್ತದೆ.<br><br>ಹಂಚಿಕೆ ಪಡೆದ ಘಟಕಗಳ ಪೈಕಿ ಕೆ.ಎಸ್.ಆರ್.ಪಿ. ಮಂಗಳೂರು 50-00 ಎಕರೆ ಮತ್ತು ಜಿಲ್ಲಾ ಕಾರಾಗೃಹ ಇಲಾಖೆ, ಮಂಗಳೂರು 63-89 ಎಕರೆ ಪ್ರದೇಶದಲ್ಲಿ ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಇನ್ನುಳಿದ ಒಬ್ಬ ಉದ್ದಿಮೆದಾರರಾದ ಮೆ॥ ಕೋಸ್ಟಲ್ ರೆಫ್ರಿಜರೇಷನ್ & ಫ್ಯಾಬ್ರಿಕೇಟರ್ಸ್ ಯೋಜನೆ ಅನುಷ್ಠಾನಗೊಳಿಸಲು ಕಾಲಾವಕಾಶವಿರುತ್ತದೆ. |

| | | |
|---|---|---|
| ಇ. | ಈ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರ ನೀಡುವುದು? | ಈ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ/ ಕೈಗೊಳ್ಳಲಾಗುವ ಕ್ರಮಗಳು ಕೆಳಗಿನಂತಿದೆ:<br>• ಕೈಗಾರಿಕಾ ಪ್ರದೇಶದಲ್ಲಿ ಈಗಾಗಲೇ ರಸ್ತೆ, ಚರಂಡಿ ಅಭಿವೃದ್ಧಿಪಡಿಸಲಾಗಿರುತ್ತದೆ.<br>• ಮುಡಿಪುನಿಂದ ಕೈಗಾರಿಕಾ ಪ್ರದೇಶಕ್ಕೆ 1.20 ಕಿ.ಮೀ. ಉದ್ದದ 24.00 ಮೀಟರ್ ಅಗಲದ ಸಂಪರ್ಕ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.<br>• ಸಾಲೆತ್ತೂರು ಸಬ್-ಸ್ಟೇಷನ್‌ನಿಂದ ಕೆನಾರ ಕೈಗಾರಿಕಾ ಪ್ರದೇಶಕ್ಕೆ 11ಕೆವಿ HT ಫೀಡರ್ ಲೈನ್ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದ್ದು ಕಾಮಗಾರಿಯು ಪೂರ್ಣಗೊಂಡನಂತರ ಕೈಗಾರಿಕಾ ಪ್ರದೇಶಕ್ಕೆ 4 ಮೆಗಾ ವ್ಯಾಟ್ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.<br>• ಕೆ.ಐ.ಎ.ಡಿ.ಬಿ.ಯು ಬಂಟ್ವಾಳ ತಾಲ್ಲೂಕಿನ ಪಜೀರು ಮತ್ತು ಕೈರಂಗಳ ಗ್ರಾಮದಲ್ಲಿ ಅಭಿವೃದ್ಧಿ ಪಡಿಸಿರುವ IT-SEZ ಹಾಗೂ Non-SEZ ಕೈಗಾರಿಕಾ ಪ್ರದೇಶಕ್ಕೆ ಹಾಗೂ ಕೆನಾರ ಕೈಗಾರಿಕಾ ಪ್ರದೇಶಕ್ಕೆ ನೇತ್ರಾವತಿ ನದಿಯಿಂದ 1.00 ಎಂ.ಜಿ.ಡಿ. ಸಾಮಾರ್ಥ್ಯದ ನೀರು ಸರಬರಾಜು ಅನುಷ್ಠಾನಗೊಳಿಸಿರುತ್ತದೆ. ಇದರಲ್ಲಿ 0.50 ಎಂ.ಜಿ.ಡಿ. ನೀರನ್ನು IT-SEZ ಹಾಗೂ Non-SEZ ಕೈಗಾರಿಕೆಗಳಿಗೆ ಒದಗಿಸುತ್ತಿದ್ದು, ಉಳಿದ 0.50 ಎಂ.ಜಿ.ಡಿ. ನೀರನ್ನು ಕೆನರಾ ಕೈಗಾರಿಕಾ ಪ್ರದೇಶಕ್ಕೆ ಒದಗಿಸುವುದಕ್ಕಾಗಿ ಮಿತ್ತಕೋಡಿ Booster Pumping Station ನಿಂದ 3.50 ಕಿ.ಮೀ. ಉದ್ದದ pipeline ಅಳವಡಿಸುವ ಕಾಮಗಾರಿಯನ್ನು ಶೀಘ್ರದಲ್ಲೇ ಕೈಗೆತ್ತಿಕೊಳ್ಳಲಾಗುವುದು. |

ಸಂಖ್ಯೆ: ಸಿಐ 161 ಐಎಪಿ 2018

(ಕೆ.ಜೆ. ಜಾರ್ಜ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು